ದಿನಾಂಕಃ 18.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : 1 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದ :**

ಪ್ರತಿವಾದಿ ಕುಟುಂಬದವರೆಲ್ಲಾ ಒಪ್ಪಂದಕ್ಕೆ ಸಹಿ ಮಾಡಿರುವ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಮೂಲ ಪುರುಷ ಕುಳ್ಳಮಂಚಯ್ಯನ ಮಕ್ಕಳಾದ ಮೊದಲನೇ ಮಗ ಮಂಚಯ್ಯ ಮತ್ತು ಆತನ ಹೆಂಡತಿ, ಮಕ್ಕಳು ಈ ಪ್ರಕರಣದಲ್ಲಿ ಪಕ್ಷಗಾರರಲ್ಲ ಎಂದರೆ ಅವರು ಮುಂಚೆಯೇ ಭಾಗವಾಗಿರುತ್ತಾರೆ ಎನ್ನುತ್ತಾರೆ. ಭಾಗವಾಗಿರುವ ಬಗ್ಗೆ ನಾನು ದಾಖಲೆ ನೋಡಿರುತ್ತೇನೆ.

**2.** ಪ್ರತಿವಾದಿಗಳು ಅವರ ಜೀವನೋಪಾಯಕ್ಕೆ ವ್ಯವಸಾಯವನ್ನು ಅವಲಂಭಿಸಿರುತ್ತಾರೆ ಎಂದರೆ ಇರಬಹುದು. ಈ ಪ್ರಕರಣ ಮತ್ತು ಅಸಲು ದಾವಾ ಸಂಖ್ಯೆ 19/2018 ರಲ್ಲಿ ಪ್ರತಿವಾದಿ ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳು ಸೇರಿರುತ್ತವೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 263/2005 ರಲ್ಲಿ ಈ ಪ್ರಕರಣ ಮತ್ತು ಅಸಲು ದಾವಾ ಸಂಖ್ಯೆ 19/2018 ರಲ್ಲಿ ಹೇಳಿರುವ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಗಳು ಎಂದು ವಿಭಾಗ ಕೇಳಿದ್ದು ಅದು ಡಿಕ್ರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಡಿಕ್ರಿ ಆಧಾರದ ಮೇಲೆ FDP 9/2018 ದಾಖಲಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳ ಕುಟುಂಬದ ಎಲ್ಲಾ ಸದಸ್ಯರು ನಿಪಿ-1 ಕ್ಕೆ ಸಹಿ ಮಾಡದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯ ಮಕ್ಕಳು ನಿಪಿ-1 ಕ್ಕೆ ಸಹಿ ಮಾಡಿಲ್ಲ

ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ನೋಂದಣಿ ಸಮಯದಲ್ಲಿ ಬರುತ್ತಾರೆಂದು 6 ನೇ ಪ್ರತಿವಾದಿ ನಮಗೆ ತಿಳಿಸಿದ್ದರು ಎನ್ನುತ್ತಾರೆ. ನಿಪಿ-1 ರಲ್ಲಿ 6 ನೇ ಪ್ರತಿವಾದಿಯ ಮಕ್ಕಳ ಹೆಸರು ಬರೆಯಿಸಿ, ಅಳಿಸಲಾಗಿರುತ್ತದೆ ಎಂದರೆ ಸರಿ.

**3.** ನಿಪಿ-1 ರ ಕರಾರು ಪತ್ರವನ್ನು ಶ್ರೀರಂಗಪಟ್ಟಣದ ನಾಗೇಶ್ ಎನ್ನುವವರು ತಯಾರು ಮಾಡಿರುತ್ತಾರೆ. ಸದರಿ ನಾಗೇಶ್ ರವರು ಮಂಡ್ಯದಲ್ಲಿ ಡೀಡ್ ರೈಟರ್ ಆಗಿ ಕೆಲಸ ಮಾಡುತ್ತಾರೆಂದರೆ ಸರಿ, ಸಾಕ್ಷಿ ಮುಂದುವರೆದು ಅವರು ಶ್ರೀರಂಗಪಟ್ಟಣದಲ್ಲಿಯೂ ಕೆಲಸ ಮಾಡುತ್ತಾರೆ ಎನ್ನುತ್ತಾರೆ. ನಿಪಿ-1 ನ್ನು ಎಲ್ಲಿ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ 19/2018 ರಲ್ಲಿ ಹಾಜರುಪಡಿಸಿರುವ ಕರಾರುಪತ್ರವನ್ನು ಬೆಂಗಳೂರಿನಲ್ಲಿಯೇ ತಯಾರು ಮಾಡಿರುತ್ತಾರೆಯೇ ಎಂದರೆ ಸಾಕ್ಷಿ ಅದನ್ನು ಸಹ ನಾಗೇಶ್ ರವರು ತಯಾರು ಮಾಡಿದ್ದು, ಬೆಂಗಳೂರಿನಲ್ಲಿ ತಯಾರು ಮಾಡಿರುತ್ತೇನೆ ಎಂದು ನನಗೆ ತಿಳಿಸಿರುತ್ತಾರೆ ಎನ್ನುತ್ತಾರೆ. ಕರಾರುಪತ್ರವನ್ನು ತಯಾರು ಮಾಡಲು ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿ ನಾಗೇಶ್ ರವರು ವಕೀಲರ ಬಳಿ ದಾಖಲೆ ತೆಗೆದುಕೊಂಡು ಹೋಗಿ ತಯಾರು ಮಾಡಿರುತ್ತಾರೆ ಎನ್ನುತ್ತಾರೆ. ನಿಪಿ-1 ಕ್ಕೆ ಪ್ರತಿವಾದಿಗಳು ಎಲ್ಲಿ ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಅವರ ಮನೆಗೆ ಹೋಗಿ ಸಹಿ ಮಾಡಿಸಿಕೊಂಡು ಬಂದಿರುವುದಾಗಿ ಹೇಳುತ್ತಾರೆ. ನಾನು, ಗೋಪಾಲಗೌಡ ಹಾಗೂ ಶಿವಣ್ಣ ಸಹಿ ಮಾಡಿಸಿಕೊಂಡು ಬರಲು ಪ್ರತಿವಾದಿಗಳ ಮನೆಗೆ ಹೋಗಿದ್ದೆವು. ನಿಪಿ-1 ರಲ್ಲಿ ಹೆಬ್ಬೆಟ್ಟಿನ ಗುರುತು ಹಾಕಿರುವವರ ಹೆಸರನ್ನು LTM ಎಂದು ನಾಗೇಶ್ ರವರು ಬರೆದಿರುತ್ತಾರೆ. ನಿಪಿ-1 ರಲ್ಲಿ LTM ಹಾಗೂ ಅವರ ಹೆಸರು ಬರೆದಿರುವುದು ಬೇರೆ ಬೇರೆ ಹಸ್ತಾಕ್ಷರಗಳಲ್ಲಿರುತ್ತದೆ ಎಂದರೆ ಸರಿಯಲ್ಲ. ನಾಗೇಶ್ ರವರು ಪ್ರತಿವಾದಿಗಳ ಮನೆಗೆ ಬಂದಿರುವುದಿಲ್ಲ ಹಾಗೂ ನಿಪಿ-1 ರ ಲ್ಲಿ ಅವರು LTM ಹಾಗೂ ಅವರ ಹೆಸರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

**4.** ಪ್ರತಿವಾದಿಗಳು ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಕೊಂಡಿಲ್ಲ ಹಾಗೂ ನಿಪಿ-

1 ನ್ನು ಅವರು ಬರೆದುಕೊಟ್ಟಿಲ್ಲ ಎಂದರೆ ಸುಳ್ಳು. ಪ್ರತಿವಾದಿಗಳಿಗೆ ನಿಪಿ-1 ರಲ್ಲಿ ಹೇಳಿರುವ ಮುಂಗಡ ಹಣ ಸಂದಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದುರ್ಲಾಭ ಪಡೆಯುವ ಉದ್ದೇಶದಿಂದ ನಿಪಿ-1 ನ್ನು ತಯಾರು ಮಾಡಿ, ಅದರಲ್ಲಿರುವ ವಿಚಾರಗಳನ್ನು ಪ್ರತಿವಾದಿಗಳಿಗೆ ತಿಳಿಸದೇ ಅವರ ಸಹಿ ಪಡೆದುಕೊಂಡಿರುತ್ತೇನೆಂದರೆ ಸುಳ್ಳು, ಸಾಕ್ಷಿ ಅದನ್ನು ಓದಿ ಹೇಳಿರುತ್ತೇವೆ ಎನ್ನುತ್ತಾರೆ. ನಿಪಿ-1 ರ ಆಧಾರದ ಮೇಲೆ ಕ್ರಯಪತ್ರ ಬರೆದುಕೊಡಲು ಪ್ರತಿವಾದಿಗಳು ಭಾದ್ಯರಲ್ಲ ಎಂದರೆ ಸರಿಯಲ್ಲ. ಕ್ರಯಪತ್ರ ಬರೆಯಿಸಿಕೊಳ್ಳಲು ನಾನು ಯಾವಾಗಲೂ ತಯಾರಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5.** ನಿಪಿ-2 ರಿಂದ 11 ರ ಆಸ್ತಿಗಳು ಮಂಚಯ್ಯ ಬಿನ್ ಕುಳ್ಳಮಂಚಯ್ಯರವರ ಹೆಸರಿನಲ್ಲಿರುತ್ತದೆ. ಸದರಿ ಮಂಚಯ್ಯ ಕುಳ್ಳಮಂಚಯ್ಯನವರ ಮೊದಲನೇ ಮಗ ಎಂದರೆ ಸಾಕ್ಷಿ ಮಂಚಯ್ಯ ಬಿನ್ ಕುಳ್ಳಮಂಚಯ್ಯ ಎಂದು ಇರುವುದು 6 ನೇ ಪ್ರತಿವಾದಿಯ ಹೆಸರು, ಅವರು ತಮ್ಮ ಹೆಸರು ಮಂಚಪ್ಪ ಎಂದು ಕೆಲವೊಮ್ಮೆ ಮಂಚಯ್ಯ ಎಂದು ಹೇಳುತ್ತಾರೆ ಎನ್ನುತ್ತಾರೆ. ಕರಾರುಪತ್ರ ಮಾಡುವಾಗ ಆಧಾರ್ ಕಾರ್ಡ್ ತೆಗೆದುಕೊಂಡು ಹೋಗಬೇಕು ಎಂದರೆ ಸಾಕ್ಷಿ ಆಗ ಬೇಕಾಗಿರಲಿಲ್ಲ ಎನ್ನುತ್ತಾರೆ. ನಾನು 6 ನೇ ಪ್ರತಿವಾದಿಯ ಆಧಾರ್ ಕಾರ್ಡ್ ಅಥವಾ ಚುನಾವಣಾ ಗುರುತಿನ ಚೀಟಿಯನ್ನು ನೋಡಿರುವುದಿಲ್ಲ ಎನ್ನುತ್ತಾರೆ. 6 ನೇ ಪ್ರತಿವಾದಿಗೆ ಮಂಚಯ್ಯ ಎಂದು ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾಖಲೆಗಳನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಈ ಹಂತದಲ್ಲಿ 6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು, ಸಮಯಾವಾಕಾಶ ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**